MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 | ENGLISH DAILY | Subscription Yearly - Rs. - | THURSDAY | 8-12-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

### ದೇಶೀ ಸೋಯಾಬೀನ್ ದರ ಹೆಚ್ಚಳ

ದಾಸ್ತಾನು ಮಿತಿ ಹಿಂತೆಗೆತ ನಂತರ ದೇಶೀ ಸೋಯಾಬೀನ್ ದರ 8 ಶೇಕಡಾಕ್ಕಿಂತಲೂ ಹೆಚ್ಚಳವಾಗಿದೆಯೆನ್ನಲಾಗಿದೆ. ಮಿಲ್‌ಗಳಿಂದ, ಎಣ್ಣೆ ತಯಾರಕರಿಂದ ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಬೇಡಿಕೆ ಸಮನಾದ ಆವಕವಾಗದಿರುವುದರಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಅಧಿಕ ಉತ್ಪಾದನೆಯ ಹೊರತಾಗಿಯೂ ದರ ಹೆಚ್ಚಳದಲ್ಲಿದೆ. ಮುಂದಿನ ದಿನಗಳಲ್ಲಿ ದರ ಮತ್ತು ಹೆಚ್ಚಳವಾಗಲಿದೆಯೆನ್ನಲಾಗಿದೆ.

### ಮಲೇಶಿಯನ್ ಪಾಮೆಣ್ಣೆ ದರ ಪ್ರಬಲಗೊಳ್ಳುವ ಸಾಧ್ಯತೆ

ಮಲೇಶಿಯಾದಲ್ಲಿ ಪಾಮೆಣ್ಣೆ ಉತ್ಪಾದನೆ ಕಡಿಮೆ ಉತ್ಪಾದನಾ ಕಾಲಮಾನವನ್ನು ಪ್ರವೇಶಿಸುತ್ತಿರುವುದರಿಂದ ಉತ್ಪಾದನೆ ಇಳಿಕೆಯಾಗಬಹುದೆನ್ನಲಾಗಿದೆ. ಹಾಗೂ ಕ್ರಿಸ್‌ಮಸ್ ಹಾಗೂ ಹೊಸವರ್ಷಕ್ಕಾಗಿ ಬೇಡಿಕೆ ಹೆಚ್ಚಳವಾಗುವ ಸಾಧ್ಯತೆ ಗಳಿರುವುದರಿಂದ ದರ ಪ್ರಬಲಗಳ್ಳಬಹುದೆನ್ನಲಾಗಿದೆ. ಉತ್ಪಾದನೆ ಇಳಿಕೆಯಾಗಿ ಬೇಡಿಕೆ ತೀವ್ರ ಹೆಚ್ಚಳವಾದಲ್ಲಿ ದರ ಹೆಚ್ಚಳವಾಗುವ ಸಾಧ್ಯತೆಯಿದೆ. ನಿನ್ನೆ 3 ಶೇಕಡಾ ಹೆಚ್ಚಳ ದಾಖಲಿಸಿದ ಮಲೇಶಿಯನ್ ಪಾಮೆಣ್ಣೆ ಫ್ಯೂಚರ್ ದರ ಇಂದು 1.20 ಶೇಕಡಾ ಇಳಿಕೆ ಕಂಡಿದೆ.

### ಚಿಕಾಗೋ ಸೋಯಾಬೀನ್ ಫ್ಯೂಚರ್ ದರ ಹೆಚ್ಚಳ

ಅರ್ಜೆಂಟಿನಾದ ಒಣಹವೆ ಹಾಗೂ ಚೀನಾದಿಂದ ಹೆಚ್ಚಿದ ಆಮದು ಬೇಡಿಕೆಯಿಂದ ಚಿಕಾಗೋ ಮಾರುಕಟ್ಟೆಯಲ್ಲಿ ಸೋಯಾಬೀನ್ ದರ ಹೆಚ್ಚಳಗೊಂಡಿತು. ನವೆಂಬರ್ ತಿಂಗಳಲ್ಲಿ ಚೀನಾ 7.35 ಮಿಲಿಯನ್ ಟನ್ ಸೋಯಾಬೀನ್ ಆಮದು ಮಾಡಿಕೊಂಡಿದೆಯೆನ್ನಲಾಗಿದೆ. ಪ್ರತಿಕೂಲ ಒಣಹವೆದಿಂದ ಅರ್ಜೆಂಟಿನಾದ ಬೆಳೆ ಬಾಧಿತಗೊಂಡಿದೆಯೆನ್ನಲಾಗಿದೆ. ಇದರಿಂದ ಸೋಯಾಬೀನ್ ದರ ಹೆಚ್ಚಳಗೊಂಡಿದೆಯೆನ್ನಲಾಗಿದೆ.

### ಅಕ್ಕಿ ರಫ್ತು 33 ಶೇಕಡಾ ಹೆಚ್ಚಳ

ಎಪ್ರಿಲ್ 2022 ರಿಂದ ಸೆಪ್ಟೆಂಬರ್ ತನಕದ ಭಾರತದ ಕಡಿಯಕ್ಕಿ ರಫ್ತು 33.7 ಶೇಕಡಾ ಹೆಚ್ಚಳಗೊಂಡು 23.62 ಲಕ್ಷ ಟನ್ ಗಳಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ 17.86 ಲಕ್ಷ ಟನ್ ಗಳಷ್ಟು ಕಡಿಯಕ್ಕಿ(ಬ್ರೋಕನ್ ರೈಸ್) ರಫ್ತಾಗಿತ್ತೆನ್ನಲಾಗಿದೆ. ಇಡ್ಶೈನಾಲ್ ಉತ್ಪಾದನೆ ಹಾಗೂ ಪಶು ಪಕ್ಷಿ ಆಹಾರಗಳಲ್ಲಿ ಬ್ರೋಕನ್ ರೈಸ್ ಬಳಸಲಾಗುತ್ತಿದೆಯೆನ್ನಲಾಗಿದೆ.

### ರಾಬಿ ಬಿತ್ತನೆ ಪ್ರದೇಶ 6.8 ಶೇಕಡಾ ಹೆಚ್ಚಳ

ಇದುವರೆಗಿನ ರಾಬಿ ಬಿತ್ತನೆ ಸಾಮಾನ್ಯ ಬಿತ್ತನೆ ಪ್ರದೇಶಕ್ಕಿಂತ 6 ಶೇಕಡಾ ಹೆಚ್ಚಳ ಕಂಡಿದೆ ಯೆನ್ನಲಾಗಿದೆ. ಗೋಧಿ ಬಿತ್ತನೆ 5.36 ಶೇಕಡಾ ಹೆಚ್ಚಳಗೊಂದಿಗೆ 211.62 ಹೆಕ್ಟೇರ್ ಪ್ರದೇಶಕ್ಕೇರಿದೆ. ಇದಲ್ಲದೆ ಭತ್ತ, ಬೇಳೆಕಾಳು, ತೈಲಬೀಜಗಳ ಬಿತ್ತನೆ ಪ್ರಗತಿಯಲ್ಲಿದೆಯೆನ್ನಲಾಗಿದೆ.

### ಭಾರತದಿಂದ ಕಾಫಿ ರಫ್ತು ಉತ್ತಮ ಆರಂಭ

ಅಕ್ಟೋಬರ್ ನಿಂದ ಆರಂಭವಾಗುವ 2022–23 ರ ಕಾಫಿ ರಫ್ತು ವರ್ಷ ದಲ್ಲಿ ಭಾರತದಿಂದ ರಫ್ತು ಉತ್ತಮ ಆರಂಭ ಕಂಡಿದೆಯೆನ್ನಲಾಗಿದೆ. ಭಾರತದಿಂದ ಅಕ್ಟೋಬರ್‌ನಲ್ಲಿ 25 ಶೇಕಡಾ ಹೆಚ್ಚಳದೊಂದಿಗೆ 180000 ಚೀಲ ಕಾಫಿ ರಫ್ತಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ 1.11 ಲಕ್ಷ ಟನ್‌ಗಳಾಗಿತ್ತೆನ್ನಲಾಗಿದೆ. ಅಕ್ಟೋಬರ್‌ನಿಂದ ಡಿಸೆಂಬರ್ ತನಕ 57,669.6 ಟನ್‌ಗಳಿಗೆ ರಫ್ತು ಪರವಾನಗಿ ನೀಡಲಾಗಿದೆಯೆನ್ನಲಾಗಿದ್ದು, ಹಿಂದಿನ ವರ್ಷ ಈ ಅವಧಿಯಲ್ಲಿ 71909.3 ಟನ್ ಗಳಾಗಿತ್ತೆನ್ನಲಾಗಿದೆ. ಇದರ ವರ್ಷ ಈ ಅವಧಿಯಲ್ಲಿ 71909.3 ಟನ್‌ಗಳಾಗಿತ್ತೆನ್ನಲಾಗಿದೆ. ಇದರ ಮೌಲ್ಯ $ 163.13 ($ 172.52) ಮಿಲಿಯನ್ ಗಳೆನ್ನಲಾಗಿದೆ. ಅರೆಬಿಕಾ ಕಾಫಿ ಕಟಾವು ಪ್ರಮುಖ ಬೆಳೆಯುವ ಪ್ರದೇಶಗಳಲ್ಲಿ ಪ್ರಾರಂಭವಾಗಿದ್ದು, ರಾಬೆಸ್ಟಾ ಕಾಫಿಯ ಕಟಾವು ಕೆಲವು ವಾರಗಳಲ್ಲಿ ಆರಂಭವಾಗಲಿದೆಯೆನ್ನಲಾಗಿದ್ದು 2023 ರ ಪ್ರಥಮ ಕ್ವಾರ್ಟರ್‌ನಲ್ಲಿ ರಫ್ತು ಪ್ರಾರಂಭವಾಗಲಿದೆಯೆನ್ನಲಾಗಿದೆ. 2022–23 ರ ಕಾಫಿ ಉತ್ಪಾದನೆ 167.2 ಮಿಲಿಯನ್ ಚೀಲಗಳಾಗಬಹುದೆಂದು ICO ಅಂದಾಜಿಸಿದೆಯೆನ್ನಲಾಗಿದೆ. ಹಿಂದಿನ ವರ್ಷದ 170.83 ಮಿಲಿಯನ್ ಚೀಲ ಗಳಾಗಬಹುದೆಂದು ಅಂದಾಜಿಸಲಾಗಿದೆ. 2022–23 ರಲ್ಲಿ ಉತ್ಪಾದನೆಗಿಂತ ಬಳಕೆ 3.1 ಮಿಲಿಯನ್ ಚೀಲ ಹೆಚ್ಚಳವಾಗಬಹುದೆನ್ನಲಾಗಿದೆ. ಪ್ರಸ್ತುತ ಕಾಫಿ ಜಾಗತಿಕ ದರ ಇಳಿಕೆಯಲ್ಲಿರುವುದರಿಂದ ಸ್ಥಳೀಯ ದೇಶಿ ದರವೂ ಇಳಿಕೆಯಾಗಿದೆಯೆನ್ನಲಾಗಿದ್ದು, ಹವಾಮಾನ ವೈಪರೀತ್ಯದಿಂದ ಕೆಲವಡೆ ಬೆಳೆಹಾನಿಯಿಂದ ರೈತರು ತೊಂದರೆಗಳಾಗಿರುವುದರಿಂದ ಈಗಿನ ಇಳಿಕೆಯಲ್ಲಿರುವ ದರದಲ್ಲಿ ಮಾರಾಟ ಮಾಡುತ್ತಿಲ್ಲವೆನ್ನಲಾಗಿದೆ.